


# ಇರಲಿ ದಾಳಿಕೋರ ಧೋರಣೆ, ದಕ್ಕಲಿ ಒಂಚೂರು ಸೈರಣೆ

## ಏಷ್ಯಾಕಪ್‌ನ ಯಶಸ್ಸು ಚುಟುಕು ಕ್ರಿಕೆಟ್ ವಿಶ್ವಕಪ್ ಸಿದ್ಧತೆಗೆ ಪ್ರೇರಣೆ




ಸ್ಮೃತಿ ಮಂದಾನ: ಭಾರತೀಯ ಮಹಿಳಾ ಕ್ರಿಕೆಟ್‌ನ ಮಂದಹಾಸ!

ಏಷ್ಯಾಕಪ್ ಕ್ರಿಕೆಟ್‌ನಲ್ಲಿ ಭಾರತದ ಮಹಿಳೆಯರ ತಂಡ ಏಳನೇ ಸಲ 'ಚಾಂಪಿಯನ್' ಗೌರವಕ್ಕೆ ಪಾತ್ರವಾಗಿದೆ. ಎದುರಲ್ಲಿ 'ಟ್ವೆಂಟಿ20 ವಿಶ್ವಕಪ್' ಇದೆ. ಈ ಕಾಲಘಟ್ಟದಲ್ಲಿ ಹೊಸ ಚಿಗುರುಗಳು ಹಾಗೂ ದೋರೆಗಾಯಿಗಳ ಸಮ್ಮಿಲನದಾಟದ ಏರಿಳಿತ ಗಮನಿಸಬೇಕಿದೆ.

**■ ವಿಶಾಖ ಎನ್.**

ಈ ಸಲ ಮಹಿಳೆಯರ ಏಷ್ಯಾ ಕಪ್ ಕ್ರಿಕೆಟ್ ಫೈನಲ್‌ನಲ್ಲಿ ಬ್ಯಾಕ್‌ಫುಟ್‌ನಲ್ಲಿ ಹೆಚ್ಚು ಆಡಕೂಡದೆಂದು ಸಂಕಲ್ಪ ಮಾಡಿ ಬಂದಂತೆ ಕಂಡವರು ಸ್ಮೃತಿ ಮಂದಾನ. ಒಂಬತ್ತನೇ ಓವರ್‌ನಲ್ಲಿಯೇ ಭಾರತಕ್ಕೆ ಗೆಲುವು ತಂದಿತ್ತ ಅವರು ಬರೀ 25 ಎಸೆತಗಳಲ್ಲಿ 51 ರನ್ ಕಲೆಹಾಕಿದ್ದರು. ಎರಡು ಬೌಂಡರಿ, ಒಂದು ಸಿಕ್ಸ್ ಮಾತ್ರ ಇದ್ದ ಇನಿಂಗ್ಸ್. ಉಳಿದೆಲ್ಲ ರನ್‌ಗಳನ್ನು ಅವರು ಓಡಿಯೇ ಹೆಕ್ಕಿದ್ದು. ಶೇ. 92ರಷ್ಟು ನಿಯಂತ್ರಣವಿದ್ದ ಇನಿಂಗ್ಸ್ ಅವರದ್ದು.

ಭಾರತದ ಮಹಿಳಾ ತಂಡ ಏಳನೇ ಸಲ ಏಷ್ಯಾ ಕಪ್ ಕ್ರಿಕೆಟ್ ಗೆದ್ದಿದೆ. ಆಟಗಾರ್ತಿಯರ ಲಯದ ಕಡೆ ಗಮನಿಸಿದಾಗ ಈಗಲೂ ಗೋಜಲುಗಳಿರುವುದು